ನಿರ್ಣಯಾಧಿಕಾರಿಗಳು ಕಾನೂನಾತ್ಮಕವಾಗಿ 60 ದಿನಗಳ ಕಾಲಮಿತಿಯನ್ನು ವಿಧಿಸಿ ತೀರ್ಪನ್ನು ಹೊರಡಿಸಿರುತ್ತಾರೆ.

ನ್ಯಾಯ ನಿರ್ಣಯಾಧಿಕಾರಿಗಳು ಸದರಿ 60 ದಿನಗಳ ಕಾಲಮಿತಿಯಲ್ಲಿ ಎದರುದಾರರಾದ ಅಭಿವೃದ್ಧಿದಾರರು ಗ್ರಾಹಕರಿಗೆ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಕಲಂ 40(1)ರ ಪ್ರಕಾರ ದಂಡ/ಪರಿಹಾರದ ಮೊತ್ತವನ್ನು ಪಾವತಿಸಲು ವಿಫಲರಾದಲ್ಲಿ ಅರ್ಜಿದಾರರು ಪುನ: ಪ್ರಾಧಿಕಾರದ ಮುಂದೆ ಸದರಿ ತೀರ್ಪನ್ನು ಅನುಷ್ಠಾನಗೊಳಿಸಲು ಮನವಿ ಮಾಡಿರುತ್ತಾರೆ. ಸದರಿ ಮನವಿಯನ್ನಾದರಿಸಿ ನ್ಯಾಯ ನಿರ್ಣಯಾಧಿಕಾರಿಗಳು ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮ 25ರಂತೆ ಸದರಿ ದಂಡ/ಪರಿಹಾರದ ಮೊತ್ತವನ್ನು ಭೂ ಕಂದಾಯ ಬಾಕಿಎಂದು ಪರಿಗಣಿಸಿ ಅನುಷ್ಠಾನಗೊಳಿಸಲು ಸೂಚಿಸಿರುತ್ತಾರೆ.

ರಿಯಲ್ ಎಸ್ಟೇಟ್ ಪ್ರಾಧಿಕಾರದಲ್ಲಿ ಕಳೆದ 2 ವರ್ಷಗಳಿಂದ ತೀರ್ಪುಗಳನ್ನು ಪ್ರಕಟಿಸುತ್ತಿದ್ದು, ಪರಹಾರಕ್ಕೆ ಸಂಬಂಧಪಟ್ಟ ಅವಾರ್ಡ್‌ಗಳನ್ನು ರಿಯಲ್ ಎಸ್ಟೇಟ್ ಪ್ರಾಧಿಕಾರದ ಕಾಯ್ದೆ ಕಲಂ 40(1) ರ ಮತ್ತು ನಿಯಮ 25 ರ ಪ್ರಕಾರ ಪರಿಹಾರದ ವಸೂಲಾತಿಗಾಗಿ ನೊಂದಾಯಿತ ಯೋಜನೆಗಳ ಅಭಿವೃದ್ಧಿದಾರರ ಮೇಲೆ ವಿದಿಸಿದ ದಂಡ/ಪರಿಹಾರ ಮೊತ್ತವನ್ನು ಭೂ ಕಂದಾಯ ಬಾಕಿ ಎಂದು ಪರಿಗಣಿಸಿ ಭೂ ಕಂದಾಯ ವಸೂಲಿ ಬಾಕಿ ಎಂದು ಪರಿಗಣಿಸಿ ಸಕ್ಷಮ ಪ್ರಾದಿಕಾರಿಗಳಿಂದ ವಸೂಲಿ ಮಾಡಲು 283 ಪ್ರಕರಣಗಳ ಒಟ್ಟು ರೂ. 117,33,34,221/- (ನೂರ ಹದಿನೇಳು ಕೋಟಿ ಮೂವತ್ತು ಮೂರು ಲಕ್ಷದ ಇನ್ನೂರ ಇಪ್ಪತ್ತೊಂದು ) ಗಳನ್ನು ವಿವರಹಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ. ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂಗಳ ಅಡಿಯಲ್ಲಿ ದಂಡ/ಪರಿಹಾರದ ಬಾಕಿಗಳನ್ನು ವಸೂಲು ಮಾಡಲು ಎಲ್ಲಾ ಕಾರ್ಯ ವಿಧಾನಗಳನ್ನು ಅನುಸರಿಸಿ, ಸದರಿ ಅಭಿವೃದ್ಧಿದಾರರ ಯೋಜನೆಗಳಿಗೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರಿಗಳ ವ್ಯಾಪ್ತಿಯಲ್ಲಿ ಹೊಂದಿರುವ ಎಲ್ಲಾ ಚರ-ಸ್ಥಿರ ಆಸ್ತಿಗಳನ್ನು ಪತ್ತೆ ಹಚ್ಚಿ ನಿಯಮಾನುಸಾರ ಸಕಾಲದಲ್ಲಿ ಕ್ರಮ ಜರುಗಿಸಿ ಪ್ರಾಧಿಕಾರಕ್ಕೆ ವರದಿ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳು, ಬೆಂಗಳೂರು ಇವರಿಗೆ ಉಲ್ಲೇಖಿತ (1) & (2) ರ ಪತ್ರಗಳಲ್ಲಿ ವಿವಿಧ ಅಭಿವೃದ್ಧಿದಾರರಿಂದ ವಸೂಲಿ ಮಾಡಿ ಗ್ರಾಹಕರಿಗೆ ಪುನರ್ ಪಾವತಿಸಬೇಕಾಗಿರುತ್ತದೆ.

ಪ್ರಾಧಿಕಾರವು ಕಳೆದ ಒಂದು ವರ್ಷದಿಂದ ಬೆಂಗಳೂರು ನಗರ ಜಿಲ್ಲೆಯಲ್ಲಿ 283 ಗ್ರಾಹಕರ ಅವಾರ್ಡ್‌ಗಳ ದಂಡದ ಮೊತ್ತ ವಸೂಲಿ ಮಾಡಲು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ್ದು, ಆದರೆ, ಕೇವಲ ಒಂದು ಪ್ರಕರಣದಲ್ಲಿ ಮಾತ್ರ ದಂಡ ವಸೂಲಿ ಮಾಡಿದ್ದು, ಉಳಿದ ಯಾವುದೇ ಪ್ರಕರಣದಲ್ಲಿ ದಂಡ ವಸೂಲಿ

